# ಪ್ರತಿ ತಿಂಗಳೂ ಪಿಜಿ ಬದಲಿಸಿದ್ದೆ

## ಜ್ಯೋತಿ ಕಿರಣ್

ಕಲರ್ಸ್ ಕನ್ನಡದ 'ನಮ್ಮನೆ ಯುವರಾಣಿ'ಯ ಶಾಂಭವಿ



◆ **ನಿಮ್ಮ ಪರಿಚಯವನ್ನು ಹೇಳುವುದಾದರೆ...**

ಹುಟ್ಟಿದ್ದು ಹುಬ್ಬಳ್ಳಿ, ಓದಿ ಬೆಳೆದದ್ದು ಧಾರವಾಡ. ಡಿಪ್ಲೊಮಾ ಆಫೀಸ್ ಮ್ಯಾನೇಜ್‌ಮೆಂಟ್ ಓದಿದೆ. ಆಕಸ್ಮಿಕವಾಗಿ ಕಿರುತೆರೆ ಪ್ರವೇಶ ಮಾಡಿದೆ. ಮಂಡ್ಯ ರಮೇಶ್ 'ಪಂಚರಂಗಿ' ಶೋ ನಡೆಸಿಕೊಡುತ್ತಿದ್ದರು. ಅದಕ್ಕೆ ನನ್ನ ಗೆಳತಿ ಜೊತೆ ಹೋಗಿದ್ದೆ. ನನಗೆ ಆಡಿಷನ್ ನೀಡುವ ಉದ್ದೇಶ ಇರಲಿಲ್ಲ ಕೇಳಿದರು ಎಂದು ನೀಡಿದೆ ಆಯ್ಕೆಯಾದೆ. ಆ ಮೂಲಕ 'ಗುಪ್ತಗಾಮಿನಿ'ಗೆ ಆಡಿಷನ್ ಕಳಿಸಿದರು. ಆರೂರು ಜಗದೀಶ್ ಸಹಾಯಕ ನಿರ್ದೇಶಕರಾಗಿದ್ದರು. ಅವರು ಆಡಿಷನ್ ಬಗ್ಗೆ ಹೇಳಿಕೊಟ್ಟರು. ಅದರಲ್ಲಿ ಪಾತ್ರವೂ ಸಿಕ್ಕಿತು ಅದೇ ನನ್ನ ಅಭಿನಯಕ್ಕೆ ಮುನ್ನುಡಿ ಬರೆಯಿತು. ಆಮೇಲೆ 'ನಿತ್ಯ', 'ಸುಮತಿ', 'ಪಾಪ ಪಾಂಡು', 'ಸಿಲ್ಲಿ ಲಲ್ಲಿ'ಯಲ್ಲಿ ಸೂಜಿಯಾದೆ. ಅದು ದೊಡ್ಡ ಹೆಸರು ತಂದುಕೊಟ್ಟಿತು. ಅದೇ ಬ್ಯಾನರ್‌ನಲ್ಲಿ 'ಪಾಂಡುರಂಗ ವಿಠ್ಠಲ' ಮಾಡಿದೆ. ನಂತರ ಮದುವೆ, ಆರೇಳು ವರ್ಷ ಬಿಡುವು ತೆಗೆದುಕೊಂಡೆ. ಸುಮಾರು 30 ಸೀರಿಯಲ್ ಮಾಡಿದ್ದೇನೆ. ಇವತ್ತೂ ಸೂಜಿ ಎಂದೇ ಜನ ಗುರುತಿಸುತ್ತಾರೆ. ಎರಡು ವರ್ಷದಿಂದ ಮರು ಪ್ರವೇಶ ಮಾಡಿದ್ದೇನೆ. ಅಪ್ಪ– ಅಮ್ಮ, ಅತ್ತೆ– ಮಾವ, ಆರುವರ್ಷದ ಮಗಳಿದ್ದಾಳೆ ಅವಳು ಸೇರಿ ಪತಿಯ ಬೆಂಬಲದಿಂದ ಕಲಾವಿದೆಯಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗುತ್ತಿದೆ.

◆ **ಸದಾ ನಿಮ್ಮನ್ನು ಕಾಡುವ ಸಂದರ್ಭಗಳ ಬಗ್ಗೆ ಹೇಳಬಹುದಾ?**

ನಟನೆ ಸಂಬಂಧ ಬೆಂಗಳೂರಿಗೆ ಬಂದಾಗ ಪಿಜಿಯಲ್ಲಿ ಇದ್ದೆ. ಆಗ ಒಂಟಿತನ ಕಾಡಿದ್ದಿದೆ. ಆಗ ನಿರಂತರವಾಗಿ ಪಿಜಿ ಬದಲಾಯಿಸಬೇಕಾದ ಸನ್ನಿವೇಶ ಎದುರಾಗುತ್ತಿತ್ತು. ಏನೇನೋ ಸಮಸ್ಯೆಯ ಕಾರಣಕ್ಕೆ ತಿಂಗಳಿಗೊಂದು ಬದಲಿಸಿದ್ದೂ ಉಂಟು. ನನ್ನದೇ ಸ್ವಂತ ನೆಲೆ ಕಂಡುಕೊಳ್ಳುವ ತನಕ ಸ್ವಲ್ಪ ಕಷ್ಟ ಆಗಿತ್ತು. ಅಷ್ಟರಲ್ಲಿ ನಾನು ಏಳು ವರ್ಷ ಕಳೆದಿದ್ದೆ. ಬೇರೆಯವರಂತೆ ತೀರ ಕಷ್ಟ ಆಗದೇ ಇದ್ದರೂ ಸ್ವವಿವೇಚನೆಯಿಂದ ನನ್ನ ದಾರಿಯನ್ನು ಗುರುತಿಸಿಕೊಂಡೆ. ಈ ಕ್ಷೇತ್ರದಲ್ಲಿ ಪರಿಚಿತರು ಯಾರೂ ಇರಲಿಲ್ಲ. ನಟನೆಗೆ ಸಂಬಂಧಿಸಿದಂತೆ ಔಪಚಾರಿಕ ತರಬೇತಿಯನ್ನೂ ತೆಗೆದುಕೊಂಡಿಲ್ಲ. ಆರಂಭದಲ್ಲಿ ಹಲವರ ಸಹಕಾರದಿಂದ ಮುನ್ನಡೆದೆ. 'ಸಿಲ್ಲಿ ಲಲ್ಲಿ' ಆತ್ಮ ವಿಶ್ವಾಸವನ್ನು ತುಂಬಿದ್ದರಿಂದ ಇಲ್ಲಿ ಉಳಿದಿದ್ದೇನೆ.

◆ **ನಿಮ್ಮ ಪಾತ್ರಗಳು ಮತ್ತು ನಿರೀಕ್ಷೆಯ ಬಗ್ಗೆ ಹೇಳುವುದಾದರೆ...**

ನಟನಾ ವೃತ್ತಿಯ ಎರಡನೇ ಇನಿಂಗ್ಸ್ ಆರಂಭಿಸಿದ ಮೇಲೆ ಮೂರು ನಾಲ್ಕು ಸಿನಿಮಾ ಮಾಡಿದ್ದೇನೆ. ಆದರೆ ಸೂಜಿ ಪಾತ್ರವನ್ನು ನೋಡಿದವರು ಇಷ್ಟು ಚಿಕ್ಕ ವಯಸ್ಸಿನವರು ತಾಯಿಯ ಪಾತ್ರ ಏಕೆ ಮಾಡುತ್ತೀರಿ ಎಂದು ಕೇಳುತ್ತಾರೆ. ವೈಯಕ್ತಿಕವಾಗಿ ಪಾತ್ರ ಯಾವುದಾದರೂ ತೊಂದರೆ ಇಲ್ಲ. ಪಾತ್ರ ನನಗೆ ಇಷ್ಟ ಆಗಬೇಕು, ಅದಕ್ಕೆ ನಾನು ಹೊಂದಿಕೊಂಡರೆ ಸಾಕು. ಅಜ್ಜಿ ಪಾತ್ರವನ್ನೂ ಬೇಕಾದರೆ ಮಾಡುತ್ತೇನೆ. ಪಾತ್ರ ಚೆನ್ನಾಗಿರಬೇಕು ಅದನ್ನು ಜನ ಗುರುತಿಸುವಂತೆ ಇರಬೇಕು. ಇಲ್ಲದಿದ್ದರೆ ಯಾವ ಪಾತ್ರ ಮಾಡಿದರೂ ಪ್ರಯೋಜನ ಇಲ್ಲ.

◆ **ಹಿಂದೆ ಧಾರಾವಾಹಿಗಳು ಚೆನ್ನಾಗಿ ಬರ್ತಾ ಇದ್ದವು. ಈಗ ಅಂತಹ ಕಥೆ ಬರಲ್ಲ ಎನ್ನುವ ವೀಕ್ಷಕರ ಆರೋಪದ ಬಗ್ಗೆ ಏನಂತೀರಿ?**

ಧಾರಾವಾಹಿಯ ಬಹುತೇಕ ಕಥೆಗಳು ಟೀವಿ ವಾಹಿನಿಯ ವ್ಯವಸ್ಥಾಪಕರ ಸೂಚನೆಯಂತೆ ಬರುತ್ತವೆ. ಆಯಾ ವಾರದ ಮಾರುಕಟ್ಟೆಯ ಆಧಾರದ ಮೇಲೆ ಮುಂದಿನ ವಾರದ ಕಥೆ ನಿರೂಪಣೆ ಆಗುತ್ತದೆ. ಜನ ಬೈಯುತ್ತಾರೆ ಅಂದರೆ ಅದನ್ನು ನೋಡ್ತಾರೆ ಅಂತ ಅರ್ಥ. ಐದರಿಂದ ಹತ್ತು ವರ್ಷಗಳ ತನಕ ಸೀರಿಯಲ್ ಪ್ರಸಾರ ಆಗಿರುವ ಇತಿಹಾಸ ಇದೆ. ಅದಕ್ಕೆಲ್ಲ ವೀಕ್ಷಕರೇ ಕಾರಣ. ವೀಕ್ಷಕರು ಏಕೆ ದೂರುತ್ತಾರೆ ಎನ್ನುವುದಾದರೆ, ಅವರು ಯಾವುದೋ ಒಂದು ಪಾತ್ರವನ್ನು ಒಳಹೊಕ್ಕಿರುತ್ತಾರೆ. ಆ ಪಾತ್ರಕ್ಕೆ ಅನ್ಯಾಯ, ನೋವು ಆದರೆ ಅವರು ವೇದನೆಯನ್ನು ಅನುಭವಿಸುತ್ತಾರೆ. ಪಾತ್ರವನ್ನು ಹೀನವಾಗಿ ತೋರಿಸಿದಾಗ ಕೂಡ ನೊಂದು ಪ್ರತಿಕ್ರಿಯೆ ನೀಡುತ್ತಾರೆ. ಅವರು ದೂರುವ ಧಾರಾವಾಹಿ ನೋಡುವುದಿಲ್ಲ ಎನ್ನುವುದು ಸುಳ್ಳು. ಎಲ್ಲರಿಗೂ ಅವರದೇ ಆದ ಅಭಿಪ್ರಾಯ ಇರುತ್ತದೆ. ನಿತ್ಯ ಹತ್ತು ಸಾವಿರ ಕಾಮೆಂಟ್ ಬರುತ್ತದೆ ಎಂದರೆ ಅಷ್ಟೂ ಮಂದಿ ನೋಡುತ್ತಾರೆ. ಅವರು ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಪ್ರತಿಕ್ರಿಯಿಸುತ್ತಾರೆ. ಕಲಾವಿದರಾಗಿ ಲೇಖಕರು ಮತ್ತು ನಿರ್ದೇಶಕರ ನಿರೀಕ್ಷೆಯನ್ನು ಮುಟ್ಟುವ ಪ್ರಯತ್ನವನ್ನು ಮಾಡುತ್ತೇವೆ. ಈಗ ಸಾಮಾಜಿಕ ಮಾಧ್ಯಮಗಳು ಹೆಚ್ಚಿರುವುದರಿಂದ ಜನರ ಅಭಿಮತ ಗೊತ್ತಾಗುತ್ತಿದೆ. ಮೊದಲು ಈ ರೀತಿ ಇರಲಿಲ್ಲ. ಮೊದಲು ನಟರಿಗೂ ಹೆಚ್ಚು ಅವಕಾಶಗಳು ಇರಲಿಲ್ಲ. ಟೀವಿ ಪರದೆಯ ಮೇಲೆ ಕಾಣಿಸಿಕೊಳ್ಳಬೇಕಿತ್ತು. ಜನ ಪಾತ್ರದ ಮೂಲಕ ನೋಡುತ್ತಾರೆ. ಪಾಸಿಟಿವ್ ನೆಗೆಟಿವ್ ಅಭಿಪ್ರಾಯಬರುತ್ತವೆ. ನಟರಾದ ನಾವು ಸಮತೋಲನವಾಗಿ ಅದನ್ನು ತೆಗೆದುಕೊಳ್ಳಬೇಕು. ವೀಕ್ಷಕರಿಗೆ ಕಥೆಯ ಹಿನ್ನೆಲೆ ಏನು? ಇದರ ಹಿಂದಿನ ಉದ್ದೇಶ ಗೊತ್ತಿರುವುದಿಲ್ಲ. ಅವರು ಎಂತಹದ್ದೇ ಅಭಿಪ್ರಾಯ ನೀಡಿದರೂ ಅದನ್ನು ಆಶೀರ್ವಾದ ಎಂದು ಭಾವಿಸಬೇಕು.

■ ರಾಘವೇಂದ್ರ ಕೆ.